ರೋಗ ನಿರೋಧಕ ಲಸಿಕೆಗಳ ಕೊರತೆಯ ಬಗ್ಗೆ

ಟಿಸಿಕೆ. ಶ್ರೀ ಎಸ್. ಎನ್. ಕಡಪಟ್ಟಿ (ಹುನಗುಂದ).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ದ್ರಾಕ್ಷಿ ಹಾಗೂ ಇತರ ಬೆಳೆಗಳಿಗೆ ಅವಶ್ಯವಾಗಿ ಬೇಕಾಗುವ ರೋಗ ನಿವಾರಕ ರಿಡೋಮಿಲ್ ಹಾಗೂ ಜಿಬ್ರಾಲಿಕ್ ಆಸಿಡ್‌ಗಳ ಅಂದಾಜು ಪ್ರಮಾಣ ಎಷ್ಟು ?

ಆ) ರಿಡೋಮಿಲ್ ಬಹಿರಂಗ ಮಾರುಕಟ್ಟೆಯಲ್ಲಿ ಸಿಗದೆ ಕಾಳಸಂತೆಯಲ್ಲಿ ಅತ್ಯಂತ ದುಬಾರಿಯಾಗಿ ಹಾಗೂ ತೊಂದರೆಯಿಂದಾಗುತ್ತಿದ್ದ ಜಿಬ್ರಾಲಿಕ್ ಆಸಿಡ್ ಕೊರತೆಯಿಂದ ಸಿಗಂತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕೇಂದ್ರ ಸರ್ಕಾರಕ್ಕೆ ವಿನಂತಿಸಿ ರಾಜ್ಯಕ್ಕೆ ಬೇಕಾಗುವಷ್ಟು ಆಮದು ಮಾಡಿಕೊಳ್ಳುವ ವ್ಯವಸ್ಥೆ ಮಾಡಲಾಗುವುದೇ ?

ಶ್ರೀ ವೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ದ್ರಾಕ್ಷಿ ಮತ್ತು ಮೆಣಸು ಬೆಳೆಗಳಿಗೆ ಬೇಕಾಗಿರುವ ರಿಡೋಮಿಲ್ ವಾರ್ಷಿಕ ಅಂದಾಜು ಅಗತ್ಯ ೧೫ ಟನ್ನುಗಳು.

ದ್ರಾಕ್ಷಿಗೆ ಬೇಕಾಗಿರುವ ಜಿಬ್ರಾಲಿಕ್ ಆಸಿಡ್ ವಾರ್ಷಿಕ ಅಂದಾಜು ಅಗತ್ಯ ೧೮ ಕೆ.ಜಿ.ಗಳು

ಆ) ರಿಡೋಮಿಲ್ ಆಮದು ಮಾಡಿಕೊಳ್ಳಬೇಕಾಗಿದೆ. ಕೇಂದ್ರ ಸರ್ಕಾರ ಅಧಿಕೃತವಾಗಿ ಆಮದು ಮಾಡಿಕೊಳ್ಳಲು ಅನುಮತಿ ಇಲ್ಲ.

ಜಿಬ್ರಾಲಿಕ್ ಆಸಿಡ್ ಮುಕ್ತ ಮಾರುಕಟ್ಟೆಯಲ್ಲಿ ಹಾಗೂ ಕೆಲವು ಸಹಕಾರಿ ಸಂಘಗಳಲ್ಲಿ ತೊಂದರೆಯಿಲ್ಲದೆ ದೊರಕುತ್ತಿದೆ.

ಇ) ಹೌದು. ರಿಡೋಮಿಲ್ ಅಗತ್ಯ ಕಂಡು ರೈತರ ಉಪಯೋಗಕ್ಕಾಗಿ ಈ ಔಷಧವನ್ನು ಆಮದು ಮಾಡಿಕೊಂಡು ರೈತರಿಗೆ ಒದಗಿಸಲು ಕೇಂದ್ರ ಸರ್ಕಾರವನ್ನು ವಿನಂತಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರವು ರಿಡೋಮಿಲ್ ಔಷಧವು ಕ್ಷೇಮಕರವಲ್ಲವೆಂದೂ, ಈ ಔಷಧದ ಆಮದಿದೆ ಮಂತ್ತು ಉಪಯೋಗಕ್ಕೆ ಪರವಾನಿಗೆ ಕೊಟ್ಟಿಲ್ಲ. ಆದರೆ ಈ ರೋಗವನ್ನು ತಡೆಗಟ್ಟಲು ಈಗಾಗಲೇ ಷರತ್ತಿನ ಮೇಲೆ ಪರವಾನಿಗೆ ಕೊಟ್ಟಿರುವ "ಕಾರತನ" "ಬ್ರೈಡಿಮಾರ್ಫ್" ಮಂತ್ತು "ಬೆನಾಮಿಲ್" ಔಷಧಿಗಳನ್ನು ಉಪಯೋಗಿಸಲು ಸೂಚಿಸಿರುತ್ತಾರೆ.

ಸ್ಪ್ರಿಂಕ್ಲರ್ ನೀರಾವರಿ ಯೋಜನೆಗೆ ಕೇಂದ್ರದ ಧನಸಹಾಯ

ಟಿಜೆಕೆ. ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ನೀರಿನ ಮಿತವ್ಯಯ ಬಳಕೆ ಅಥವಾ ಇದ್ದ ನೀರಿನಿಂದ ಹೆಚ್ಚಿನ ಕ್ಷೇತ್ರಕ್ಕೆ ನೀರು ಉಪಯೋಗಿಸಲಿಕ್ಕೆ ಅನುಕೂಲವಾಗುವ ಡ್ರಿಪ್ ಹಾಗೂ ಸ್ಪ್ರಿಂಕ್ಲರ್ ನೀರಾವರಿ ಮಾಡುವ ರೈತರಿಗೆ ಸಹಾಯ ಧನ ಒದಗಿಸುತ್ತಿರುವುದ ನಿಜವೇ ?

ಆ) ಡ್ರಿಪ್ ಹಾಗೂ ಸ್ಪ್ರಿಂಕ್ಲರ್ ನೀರಾವರಿ ಮಾಡಿದಲ್ಲಿ ಕೇಂದ್ರ ಸರ್ಕಾರದ ಸಹಾಯ ಧನ ನೀಡುವುದೇ ? ಹಾಗಿದ್ದಲ್ಲಿ ಯಾವ ಪ್ರಮಾಣದಲ್ಲಿ ನೀಡಲಾಗಿದೆ.

ಇ) ಕಳೆದ ೩ ವರ್ಷಗಳಲ್ಲಿ ಸದರಿ ನೀರಾವರಿಗೆ ರಾಜ್ಯ ರೈತರಿಗೆ ಕೊಟ್ಟ ಸಹಾಯಧನ ಎಷ್ಟು ಹಾಗೂ ಅದರಲ್ಲಿ ಕೇಂದ್ರದ ಸಹಾಯ ಧನವೆಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.

ಆ) ಹೌದು. ಹನಿ ನೀರಾವರಿ ಯೋಜನೆಯಡಿಯಲ್ಲಿ ಮತ್ತು ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆಯಡಿಯಲ್ಲಿ ಸ್ಪ್ರಿಂಕ್ಲರ್ ನೀರಾವರಿ ಉಪಕರಣಗಳನ್ನು ಒದಗಿಸಲು ಕೇಂದ್ರ ಸರ್ಕಾರವು ಸೇಕಡ ೫೦ ಸಹಾಯ ಧನ ನೀಡುವುದು.

ಇ) ೧) ೧೯೮೬-೮೭ರಲ್ಲಿ ಪ್ರಾಯೋಗಿಕ ಹನಿ ನೀರಾವರಿ ಯೋಜನೆಯನ್ನು ತೆಗೆದುಕೊಳ್ಳಲಾಗಿದ್ದು ಇಲ್ಲಿಯವರೆಗೆ ಒಟ್ಟು ೭೩೧೮೩ ರೂ.ಗಳನ್ನು ಹದಿನಾಲ್ಕು ರೈತರಿಗೆ ಸಹಾಯಧನವಾಗಿ ನೀಡಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರದ ನೆರವು ಶೇಕಡ ೫೦ರಷ್ಟಿರುತ್ತದೆ.

೨) ರಾಷ್ಟ್ರೀಯ ಎಣ್ಣೆಕಾಳು ಯೋಜನೆಯಲ್ಲಿ ಸ್ಪ್ರಿಂಕ್ಲರ್ ಸೆಟ್‌ಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವ ಕಾರ್ಯಕ್ರಮವನ್ನು ೧೯೮೬-೮೭ ರಿಂದ ತೆಗೆದುಕೊಳ್ಳಲಾಗಿದೆ. ೧೯೮೬-೮೭ರಲ್ಲಿ ೩.೧೫ ಲಕ್ಷ ಸಹಾಯಧನ ಕೊಟ್ಟಿದ್ದು ಇದರಲ್ಲಿ ಕೇಂದ್ರ ಸರ್ಕಾರದ ನೆರವು ಶೇಕಡ ೫೦ ರಷ್ಟಿರುತ್ತದೆ. ೧೯೮೭-೮೮ರಲ್ಲಿ ಈ ಕಾರ್ಯಕ್ರಮಕ್ಕೆ ೨.೦೦ ಲಕ್ಷ ರೂ.ಗಳ ಅನುದಾನವಿದ್ದು ಇದರಲ್ಲೂ ಕೂಡ ಕೇಂದ್ರ ಸರ್ಕಾರದ ನೆರವು ಶೇಕಡ ೫೦ ರಷ್ಟಿರುತ್ತದೆ.

ಬೆಳಗಾಂ ಜಿಲ್ಲೆಯಲ್ಲಿ ವಿಮಾನಗಾರಿಕೆ ಅಭಿವೃದ್ಧಿ ಪಡಿಸುವುದು

೧೭೩. ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲ ಹೊಂಗಲ).—ಮಾನ್ಯ ವಿಮಾನಗಾರಿಕೆ ಮಂತ್ರಿ ಬಂದರು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂವ ಜಿಲ್ಲೆಯ ಶ್ರೀಕ್ಷೇತ್ರ ಸೊಗಲದಲ್ಲಿ ವಿಮಾನಂಗಾರಿಕೆ ಕೆರೆಯನ್ನು ಅಭಿವೃದ್ಧಿ ಪಡಿಸುವ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಬಂದರು ಮಂತ್ರಿ ವಿಮಾನಗಾರಿಕೆ ಸಚಿವರು).—

ಅ) ಹೌದು.

ಆ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ಹಣವನ್ನು ನೀಡಲಾಗಿದ್ದು, ರೂ. ೨.೦೦ ಲಕ್ಷವನ್ನು ಕರ್ನಾಟಕ ಭೂ ಸೇನಾ ಅಭಿವೃದ್ಧಿ ನಿಗಮಕ್ಕೆ ಕೆಲಸವನ್ನು ಕೈಗೊಳ್ಳಲು ಪಾವತಿ ಮಾಡಲಾಗಿದೆ

ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ವರ್ಗಾವಣೆ ಕುರಿತಂ

೫೯೯. ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಪುರಸಭೆಯಿಂದ ಪುರಸಭೆಗೆ ನೌಕರರನ್ನು ವರ್ಗಾವಣೆ ಮಾಡುವಂತೆ, ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರನ್ನು ವರ್ಗಾವಣೆ ಮಾಡುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ?

ಶ್ರೀ ಡಾ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ೪,೨೫೭

ಆ) ಈಗಾಗಲೇ ಒಂದು ಪರಿಮಿತಿಯೊಳಗೆ ವರ್ಗಾವಣೆ ಮಾಡುವ ಅವಕಾಶವಿದೆ.

ಧಾರವಾಡ ಜಿಲ್ಲೆಯಂ ಪ್ರಾಥಮಿಕ ಶಾಲೆಗಳ ಶಿಕ್ಷಕರ ಹಾಗೂ ಮಕ್ಕಳ ಸಂಖ್ಯೆ ಕುರಿತಂ

೬೦೧. ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ಹಾಗೂ ಅವುಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು?